

**ಗದಗ:** ನಾಗಾವಿಯಲ್ಲಿನ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ವಿಶ್ವವಿದ್ಯಾಲಯದ ಆವರಣದಲ್ಲಿ ಅಧ್ಯಯನ ಶಾಲೆ–2 ಕಟ್ಟಡದ ಶಂಕು ಸ್ಥಾಪನೆಯನ್ನು ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು ನೆರವೇರಿಸಿದರು.

ಇದೇ ವೇಳೆ ಸಬರಮತಿ ಆಶ್ರಮದಲ್ಲಿನ ಗಾಂಧೀಜಿ ಪ್ರತಿಮೆಗೆ ಸಿಎಂ ಸಿದ್ಧರಾಮನವರು ನಮಸ್ಕರಿಸಿದರು. ಸಭಾಪತಿ ಬಿ.ಎಸ್.ಹೊರಟ್ಟಿ, ಸಚಿವ ಎಚ್.ಕೆ.ಪಾಟೀಲ, ಸಲೀಂಅಹ್ಮದ ಸೇರಿದಂತೆ, ಸಚಿವರು, ಶಾಸಕರು, ಅಧಿಕಾರಿಗಳು ಹಾಜರಿದ್ದರು. ಸಿಎಂ ಅಹವಾಲು ಸ್ವೀಕಾರ: ನಾಗಾವಿಯಲ್ಲಿನ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ವಿಶ್ವವಿದ್ಯಾಲಯದ ಸಭಾಭವನದಲಿ ಮುಖ್ಯಮಂತ್ರಗಳಾದ ಸಿದ್ಧರಾಮಯ್ಯನವರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.